(SRI KADIDAL MANJAPPA.)

(*a*) It is not clear from the question as to what is intended by the term "Small Industrialists".

(*b*) and (*c*) Do not arise.

Sri P. R. RAMAIYA.—How do they classify the smaller industries and big industries?

Sri Kadidal MANJAPPA.—It is easy to find out.

Sri P. R. RAMAIYA.—But the Government are pleased to reply that they do not understand by what is meant by small industries.

Mr. SPEAKER.—The difficulty is, the Revenue Minister is not in charge of the Department. He isn ot briefed to answer this question. I am sorry to say in this connection that if the other Ministers are in the other House, that can be excused; otherwise, I do not know what to say.

Sri P. R. RAMAIYA.—I wish to pursue this question when the Minister for Industries comes, Sir.

Mr. SPEAKER.—Yes.

Meal Rates in Hotels

Q.—1022. **Sri S. SIDDAPPA** (Magadi).—

Will the Government be pleased to state :—

(*a*) the total number of hotels in the State;

(*b*) whether they would take steps to arrange to fix a uniform rate for meals in all the hotels in the State?

A.—**Sri Kadidal MANJAPPA** (Minister for Revenue and Public Works) [On behalf of Sri H. SIDDAVEERAPPA (Minister for Home and Industries)].—

(*a*) 4,076 as on 1st August 1953.

(*b*) No.

ಶ್ರೀ ಎಸ್. ಸಿದ್ದಪ್ಪ.—ಸ್ವಾಮಿ, ನಂಸ್ಥಾನಾಮಳಿ ಇರುವ ಹೋಟೆಲುಗಳ ಸಂಖ್ಯೆಯೆಷ್ಟು ಎಂದು ಕೇಳಿರುವುದಕ್ಕೆ 4,076 ಎಂದು ಉತ್ತರ ಕೊಡಲಾಗಿದೆ. ಇದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರುವ ವರದಿಯ ಪ್ರಕಾರ ಇಷ್ಟೇ ಇರುವುದು.

ಶ್ರೀ ಎಸ್. ಸಿದ್ದಪ್ಪ.—ಪ್ರತಿ ನಂದರ್ಭದಲ್ಲೂ ಲೈಸೆನ್ಸ್ ಪಡೆದು ಅಂಗಡಿಯಿಡಬೇಕೆಂದು ಕಾನೂನಿದ್ದಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ. ಹೋಟೆಲುಗಳನ್ನು ಸ್ಥಳೀಯ ಸಂಸ್ಥೆಗಳಿಂದ ಲೈಸೆನ್ಸ್ ಪಡೆದು ಇಡಬೇಕೆಂದು ನಿಯಮವಿದೆ.

ಶ್ರೀ ಎಸ್. ಸಿದ್ದಪ್ಪ.—ಪ್ರತಿಯೊಂದು ಹೋಟೆಲು ಗಳಲ್ಲೂ ತಿಂಡಿ ಮತ್ತು ಊಟದ ಬೆಲೆ ಸಾಮಾನ್ಯವಾಗಿ ಒಂದೇ ಇರಬೇಕೆಂದು ಅನೇಕನಲ ತಮಗೆ ಹೇಳಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಮನವಿ ಮಾಡಿರ ಬಹುದು. ಈಗ ರೆಸ್ಟ್ರಿಕ್ಷನ್ಸ್ ಹೋದಮೇಲೆ ಇದು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಎಸ್. ಸಿದ್ದಪ್ಪ.—ತಾವು ಹಾಗೆ ದರ ನಿಗದಿ ಮಾಡದಿರುವುದರಿಂದ ಹೋಟೆಲುಗಳಲ್ಲಿ ಊಟ ಮಾಡು ವದಕ್ಕೆ ಬಹಳ ಕಷ್ಟವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೋಟೆಲುಗಳಿಗೆ ಹೋಗುವುದನ್ನು ಸಾಮಾನ್ಯವಾಗಿ ಕಡಮೆ ಮಾಡ ಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಎಸ್. ಸಿದ್ದಪ್ಪ.—ದರ ನಿಗದಿ ಮಾಡಿದರೆ ಸಾರ್ವಜನಿಕರ ದೃಷ್ಟಿಯಿಂದ ಸರ್ಕಾರ ಸಹಾಯ ಮಾಡಿದಂತಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳುವು ದೇನೋ ಸರಿ. ದರ ನಿಗದಿ ಮಾಡದಿದ್ದರೆ ಕಷ್ಟವಾಗ ಬಹುದು. ಆದರೆ ಪ್ಯೆಪೋಟಿಯಿದ್ದರೆ ದರ ತನ್ನಷ್ಟಕ್ಕೆ ತಾನೇ ಕಡಮೆಯಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಆರೋಗ್ಯ ದೃಷ್ಟಿಯಿಂದ ಹೆಲ್ತ್ ಆಫೀಸರು ಹೋಟೆಲುಗಳಿಗೆ ಭೇಟಿ ಕೊಟ್ಟಾಗ ಅವರ ಅಭಿಪ್ರಾಯವನ್ನು ಸೂಚಿಸಲು ಅಲ್ಲಿ ಒಂದು ಪುನ್ತಕವಿರಬೇಕೆಂದು ನಿಯಮವಿದ್ದರೂ ಸಹ ಯಾವ ಹೋಟೆಲಿನಲ್ಲಿಯೂ ಅಂಥ ಪುನ್ತಕವಿಲ್ಲದಿರುವುದರಿಂದ ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವುಕಡೆ ಆರೀತಿ ಇರಬೇಕು, ಆರೋಗ್ಯ ಇಲಾಖೆ ಅಧಿಕಾರಿಗಳು ತನಿಖೆ ಮಾಡಬೇಕು ಎಂಬ ನಿಯಮವಿದೆ. ಇಂಥಕಡೆ ಆ ನಿಯಮಕ್ಕೆ ಚ್ಯುತಿ ಬಂದಿದೆಯೆಂದು ಮಾನ್ಯ ನದನ್ಯರು ಹೇಳಿದರೆ ನೂಕ್ತಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಕೆಲವುಕಡೆ ಹೊಟೇಲುಗಳು ವ್ಯವಸ್ಥಿತರೀತಿಯಲ್ಲಿಲ್ಲದಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡಲು ಅವಕಾಶವಾಗಿ ದೇಶದಲ್ಲಿ ತತ್ಪರಿಣಾಮವಾಗಿ ಅನೇಕ ರೋಗಗಳು ಜಾಸ್ತಿಯಾಗುತ್ತಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ವ್ಯವಸ್ಥಿತ ರೀತಿಯಲ್ಲಿ ಡಲು ಸಾಕಾದಷ್ಟು ನಿಯಮಗಳಿವೆ. ಅದನ್ನು ಮುನಿ ಸಿಪಾಲಿಟಿಯವರು enforce ಮಾಡಬೇಕು.

Electricity to Villages in Krishnarajanagar Taluk.

Q.—995. **Sri S. H. THAMMIAH *alias* HANUMANTHE GOWDARA THAMMIAH** (Krishnarajanagar).—

Will the Government be pleased to state :—

(*a*) the names of villages in Krishnarajanagar Taluk for which the electricity, though granted, has not yet been supplied;

(*b*) the number of villages (in the abovesaid taluk) in which people have requested for electricity ?

A.—**Dr. R. NAGAN GOWDA** (Minister for Agriculture).—

(*a*) (1) Lalanahalli.
(2) Basavarajapura.
(*b*) Six.

ಶ್ರೀ ಎಸ್. ಎಚ್. ತಮ್ಮಯ್ಯ.—ಏಕೆ ಅಂದಾಜು ಮಂಜೂರಾಗಿದ್ದರೂ ಕೆಲಸ ಶುರುಮಾಡಲಿಲ್ಲ, ಸ್ವಾಮಿ ! ಅಂದಾಜು ಮಂಜೂರಾಗಿದ್ದರೂ ಈ ಗ್ರಾಮಗಳಿಗೆ ಏಕೆ ಇನ್ನೂ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ ?

Dr. R. NAGAN GOWDA.—The work is sanctioned for these two places and so far 30 per cent of the work has been completed and the balance would be completed as early as possible.

ಶ್ರೀ ಎಸ್. ಎಚ್. ತಮ್ಮಯ್ಯ.—(*b*) ಪ್ರಶ್ನೆಗೆ ಉತ್ತರವಾಗಿ ಹೇಳಿರುವ ಆರು ಗ್ರಾಮಗಳು ಯಾವು ವೆಂಬುದನ್ನು ಹೇಳುತ್ತೀರಾ ?

ಡಾ॥ ಆರ್. ನಾಗನಗೌಡ.—ಹಂಪಾಪುರ, ತಿಪ್ಪಾಪುರ, ಚಂದಗಾನಹಳ್ಳಿ, ಮಂಚಗನಹಳ್ಳಿ, ಹರದನಹಳ್ಳಿ, ಬೆಟ್ಟದಪುರ.

ಶ್ರೀ ಎಸ್. ಎಚ್. ತಮ್ಮಯ್ಯ.—ಈ ಗ್ರಾಮಗಳಿಗೆ ಹೋದಸಾರಿ ಬಡ್ಜೆಟ್ ಮಂಜೂರಾಗಿದ್ದರೂ ಏಕೆ ಕೆಲಸ ಕೈಕೊಳ್ಳಲಿಲ್ಲ ?

ಡಾ॥ ಆರ್. ನಾಗನಗೌಡ.—ಬೆಟ್ಟದಪುರ, ಮಂಚಗನಹಳ್ಳಿ ಮತ್ತು ಹರದನಹಳ್ಳಿಯಲ್ಲಿ ಲೋಡ್ ಸರ್ವೆ ಈಗ ಆಗುತ್ತಿದೆ. ಹಂಪಾಪುರ, ತಿಪ್ಪಾಪುರ, ಚಂದಗಾನಹಳ್ಳಿ ಗ್ರಾಮಗಳ ಎಸ್ಟಿಮೇಟ್ ಈಗ ಪ್ರೊಸೈಸು ತ್ತಿದೆ. ಇಲ್ಲೆಲ್ಲಾ ರಿಜರ್ವ್ ಸರಿಯಾಗಿದೆ. ಈ ಮೂರು ಗ್ರಾಮಗಳ ಕೆಲಸ ತೆಗೆದುಕೊಳ್ಳಬಹುದು.

ಶ್ರೀ ಎಸ್. ಎಚ್. ತಮ್ಮಯ್ಯ.—ಈ ವರ್ಷ ತೆಗೆದು ಕೊಳ್ಳುತ್ತಾರೆಂದು ಭರವಸೆಯಿದಬಹುದೆ ?

ಡಾ॥ ಆರ್. ನಾಗನಗೌಡ.—ಇಡಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಸ್ಟಿಮೇಟ್ ಮಾಡುವುದಕ್ಕೆ ಮುಂಚೆ ಲೋಡ್ ಸರ್ವೆ ಮಾಡಿರುವು ದಿಲ್ಲವೆ ?

ಡಾ॥ ಆರ್. ನಾಗನಗೌಡ.—ಬೆಟ್ಟದಪುರ, ಹರದನಹಳ್ಳಿ, ಮಂಚಗನಹಳ್ಳಿ ಈ ಮೂರುಕಡೆ ಲೋಡ್ ಸರ್ವೆ ಮಾಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆರು ಗ್ರಾಮಗಳಿಗೆ ಹೋದ ಸಾಲಿನ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದ್ದರೂ ಈ ಗೇಕೆ ರೋಡ್ ಸರ್ವೆ ಮಾಡುವುದು ?

ಡಾ॥ ಆರ್. ನಾಗನಗೌಡ.—ಲಾಲನಹಳ್ಳಿ ಮತ್ತು ಬಸವರಾಜಪುರಕ್ಕೆ ಹೋದವರ್ಷ ಎಸ್ಟಿಮೇಟಾಗಿತ್ತು. ಬಾಕಿ ಆರು ಗ್ರಾಮಗಳಿಗೆ ಹೋದವರ್ಷ ಎಸ್ಟಿಮೇಟಾ ಗಿರುವ ಸಮಾಚಾರ ತಿಳಿಯದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ ಬಡ್ಜೆ ಟ್ಟಿನಲ್ಲಿ ಈ ಎಸ್ಟಿಮೇಟುಗಳಿಗೆ ಹಣ ಒದಗಿಸಿಲ್ಲವೆ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸ ಬೇಕು.

Amildar Ananda Rao.

Q.—732. **Sri G. BASAPPA** (Hosadurga).—

Will the Government be pleased to state :—

(*a*) how many times Sri S. Ananda Rao, Amildar, had been placed under suspension pending enquiry about his misconduct during his service ;

(*b*) whether any report has been submitted by the Director of Anti-corruption about his case ;

(*c*) whether he is still under suspension or has he been restored ; if restored, on what grounds ;

(*d*) whether there are any other such instances where Amildars were put under suspension or granted leave or otherwise and are restored or promoted since 1947 in spite of the charges being proved ?

A.—**Sri Kadidal MANJAPPA** (Minister for Revenue and Public Works).—

(*a*) He was placed under suspension once and subsequently granted leave.

(*b*) Yes.

(*c*) He is on leave.

(*d*) The question is vague. Apparently the member means "were put under suspension or granted leave—pending enquiry." Assuming this, the answer is 'No.'

ಶ್ರೀ ಜಿ. ಬಸಪ್ಪ.—ಅವರನ್ನು ಮಂಡ್ಯ ಜಿಲ್ಲೆಗೆ ಪೋಸ್ಟ್ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ರೆವೆನ್ಯೂ ಕಮಿಷನರು ಪೋಸ್ಟ್ ಮಾಡಬೇಕೆಂದು ಹೇಳಿದರು. ಆ ವಿಚಾರ ದಲ್ಲಿ ವಿಚಾರಣೆ ನಡೆದು ಇನ್ನೂ ತೀರ್ಮಾನವಾಗಿಲ್ಲ, ಆದ್ದರಿಂದ ಪೋಸ್ಟ್ ಮಾಡುವುದು ಬೇಡವೆಂದು ಹೇಳಿದೆ.

ಶ್ರೀ ಜಿ. ಬಸಪ್ಪ.—ಲಂಚನಿರೋಧ ಇಲಾಖೆಯ ಡೈರೆಕ್ಟರು ಏನು ವರದಿ ಮಾಡಿದ್ದಾರೆ ?

Sri Kadidal MANJAPPA.—Till a final decision is taken, it is not fair to disclose the recommendation, Sir.

ಶ್ರೀ ಜಿ. ಬಸಪ್ಪ.—ಆಖ್ಯೆರು ತೀರ್ಮಾನವಾಗುವು ದಕ್ಕೆ ಮುಂಚೆ ಏಕೆ ಮಂಡ್ಯಕ್ಕೆ ಪೋಸ್ಟ್ ಮಾಡಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಪೋಸ್ ಮಾಡಿ ದರು, ಬೇಡವೆಂದು ಹೇಳಿದೆ.

ಶ್ರೀ ಜಿ. ಬಸಪ್ಪ.—(*d*) ಪ್ರಶ್ನೆಗೆ ಉತ್ತರವಾಗಿ "ಯಾವುದೂ ಇಲ್ಲ" ಎಂದು ಹೇಳಿದೆ. ಮಲ್ಲಾರಿ